ಚಿಂತಾಮಣಿ ನಗರ ಸಭೆಯ ಶಾಲಾ ಕಟ್ಟಡಕ್ಕೆ ಜಮೀನು ಮಂಜೂರಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 724(917)

ಸದಸ್ಯರ ಹೆಸರು : ಶ್ರೀ ಚೌಡರೆಡ್ಡಿ(ಚಿಂತಾಮಣಿ)

ಉತ್ತರಿಸುವ ಸಚಿವರು : ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು)

ಪ್ರಶ್ನೆ

ಅ) ಚಿಂತಾಮಣಿ ನಗರ ಸಭೆಯ ಒಂದನೆ ಡಿವಿಜನ್ ಪೆಂಕಟಗಿರಿ ಕೋಟೆಯ ಸರ್ಕಾರಿ ಪ್ರೌಢಶಾಲೆಯ ಕಟ್ಟಡ ನಿರ್ಮಾಣಕ್ಕೆ ಸ.ನಂ.34 ಎಕರೆ 30 ಗುಂಟೆ ಜಮೀನು ಮಂಜೂರು ಮಾಡಲು ಶಾಲೆಯ ಮುಖ್ಯೋಪಾಧ್ಯಾಯರು ದಿನಾಂಕ:4-1-2001ರಲ್ಲಿ ಕೋರಿಕೆ ಸಲ್ಲಿಸಿದ್ದರೂ ಸಹ ಸಂಬಂಧಪಟ್ಟ ತಹಶೀಲ್ದಾರರು ಮಂಜೂರಾತಿಗೆ ವಿಳಂಬಿಸಿ ಕ್ರಮ ತೆಗೆದುಕೊಳ್ಳದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಜಿಲ್ಲಾ ಪಂಚಾಯ್ತಿ ಕಾರ್ಯಾಲಯ ಕೋಲಾರ ಸರ್ಕಾರಿ ಆದೇಶದಂತೆ ದಿನಾಂಕ 15-10-2001ರಂತೆ 7ಲಕ್ಷ ರೂಪಾಯಿ ಮಂಜೂರಾತಿ ನೀಡಿ ಶಾಲಾ ಕಟ್ಟಡ ನಿರ್ಮಿಸಲು ಜಿಲ್ಲಾಪಂಚಾಯ್ತಿ ತಾಂತ್ರಿಕ ವಿಭಾಗ ಚಿಕ್ಕಬಳ್ಳಾಪುರ ರವರಿಗೆ ಆದೇಶ ನೀಡಿದ್ದರೂ ಸಹ ಕಂದಾಯ ಇಲಾಖೆ ನಿರ್ಲಕ್ಷತನದಿಂದ ಶಾಲಾ ಕಟ್ಟಡ ಕಟ್ಟದೇ ಇರುವುದು ಸರಿಯೇ?

ಇ) ಸರ್ವೆ ನಂ.34ರಲ್ಲಿ ಸರ್ಕಾರಿ ಜಾಗ ಇದ್ದರೂ ಸದರಿ ಶಾಲೆಗೆ ಸುಮಾರು ಒಂದು ವರ್ಷದಿಂದ ಜಮೀನು ಮಂಜೂರಾತಿ ನೀಡಲು ನಿರ್ಲಕ್ಷಿಸಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದೆ?

ಉತ್ತರ

ಅ) ಮಂಜೂರಾತಿಗೆ ಕೋರಿರುವ ಜಮೀನಿಗೆ ಇಲಾಖಾ ಮುಖ್ಯಸ್ಥರಿಂದ ಪ್ರಸ್ತಾವನೆ ಬಂದಿರಲಿಲ್ಲ. ಆದಕಾರಣ ಶಾಲಾ ಮುಖ್ಯೋಪಾಧ್ಯಾಯರಿಂದ ಕೋರಿಕೆ ಬಂದಿದ್ದರಿಂದ ಪರಿಗಣಿಸಿರುವುದಿಲ್ಲ. ಈಗ ಇಲಾಖಾ ಮುಖ್ಯಸ್ಥರಿಂದ ಕೋರಿಕೆ ಬಂದಿದ್ದು ಕಡತ ತಯಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ ಮತ್ತು ಇ) ಮಂಜೂರಾತಿಗೆ ಕೋರಿರುವ ಜಮೀನು ಕೆರೆ ಮುಳುಗಡೆ ಪ್ರದೇಶವಾದ ಕಾರಣ ಸಂಬಂಧಿಸಿದ ಇಲಾಖೆಯ ಸಹಮತಿ ಪಡೆಯುವ ಬಗ್ಗೆ ಪತ್ರ ವ್ಯವಹಾರ ನಡೆಸಿದೆ. ಕಂದಾಯ ಇಲಾಖೆಯ ನಿರ್ಲಕ್ಷದಿಂದ ಆಗಿರುವ ವಿಳಂಬದ ಪ್ರಶ್ನೆ

ಉದ್ಭವಿಸುವುದಿಲ್ಲ

ಚಿಂತಾಮಣಿ ನಗರದಿಂದ ಶಿಡ್ಲಘಟ್ಟಕ್ಕೆ ಹೋಗುವ ರಸ್ತೆ ಅಭಿವೃದ್ಧಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 725(918)

ಸದಸ್ಯರ ಹೆಸರು : ಶ್ರೀ ಚೌಡರೆಡ್ಡಿ(ಚಿಂತಾಮಣಿ)

ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು)

ಪ್ರಶ್ನೆ

1. ಚಿಂತಾಮಣಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಚಿಂತಾಮಣಿ ನಗರದಿಂದ ಶಿಡ್ಲಘಟ್ಟಕ್ಕೆ ಹೋಗುವ ಲೋಕೋಪಯೋಗಿ ಇಲಾಖೆಯ ರಸ್ತೆಯು ಶಿಡ್ಲಘಟ್ಟ ತಾಲ್ಲೂಕಿನ ಗಡಿಯವರೆವಿಗೂ ಹಳ್ಳಗಳು ರಸ್ತೆಯಲ್ಲಿ ಇದ್ದು ನಾ ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಈ ರಸ್ತೆ ದುರಸ್ತಿಗೆ ಸರ್ಕಾರ ಏನಾದರೂ ಯೋಜನೆ ಹಾಕಿಕೊಂಡಿದೆಯೇ?

3. ಸದರಿ ರಸ್ತೆ ಕಾಮಗಾರಿಯನ್ನು ಎಂದು ಪೂರ್ಣಗೊಳಿಸಲಾಗುವುದು?

ಉತ್ತರ

1. ಚಿಂತಾಮಣಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಚಿಂತಾಮಣಿ ನಗರದಿಂದ ಶಿಡ್ಲಘಟ್ಟಕ್ಕೆ ಹೋಗುವ ರಸ್ತೆಯು ಮೂಡಿಗೆರೆ ಮುಳಬಾಗಿಲು ರಾಜ್ಯ ಹೆದ್ದಾರಿಯ ಭಾಗವಾಗಿದ್ದು 12.50 ಕಿ.ಮೀ. ಉದ್ದವಿರುತ್ತದೆ. ಈ ರಾಜ್ಯ ಹೆದ್ದಾರಿಯನ್ನು ಸುಸ್ಥಿತಿಯಲ್ಲಿಡಲು ಸರ್ಕಾರವು ಕ್ರಮ ಕೈಗೊಂಡಿರುತ್ತದೆ. ಈಗ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

2. ಈ ರಾಜ್ಯ ಹೆದ್ದಾರಿಯ ಉಸ್ತುವಾರಿಯನ್ನು ಸರ್ಕಾರವು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಏಪ್ರಿಲ್-2001ರಿಂದ 3 ವರ್ಷಗಳ ಅವಧಿಗೆ ಗುತ್ತಿಗೆ ವಹಿಸಿಕೊಟ್ಟಿರುತ್ತದೆ.

3. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಗುತ್ತಿಗೆದಾರರು ಏಪ್ರಿಲ್-2001 ರಿಂದ ಪ್ರಾರಂಭಿಸಿದ್ದು ಏಪ್ರಿಲ್-2004ರ ವರೆಗೆ ಈ ರಾಜ್ಯ ಹೆದ್ದಾರಿಯ ಉಸ್ತುವಾರಿಯನ್ನು ಸತತವಾಗಿ ಮಾಡುವರು.